ಅಸಂತೋಷವಿತ್ತು. ಹಿರಿಯ ಮೇಷ್ಟ್ರು 'ನೋಡಿ, ಮೇಷ್ಟ್ರೆ! ನಾನು ಇದೇ ಊರಿನವ. ರಿಟೈರಾಗಿ ಬಂದಿದೀನಿ. ನೀವು 'ಹೂಂ' ಅಂದ್ರೆ, ಈ ಶಾಲೆಯ ಆವರಣವನ್ನ ಸರಿಪಡಿಸೋಣ. ನಾನು ನಿಮಗೆ ಸಹಕಾರ ಕೊಡ್ತೀನಿ, ಆಗಬಹುದಾ?'

'ಸ್ವಾಮಿ! ಇದು ನಿಮ್ಮೂರು. ಸ್ಕೂಲ್‌ನ ಉದ್ಧಾರಾ ಮಾಡ್ತೀನಿ ಅಂತ ನೀವು ಮುಂದೆ ಬಂದ್ರೆ ಬ್ಯಾಡಾ ಅನ್ನೋಕೆ ನಾನ್ಯಾರು? ಧಾರಾಳವಾಗಿ ಬನ್ನಿ. ಏನು ಮಾಡ್ಬೇಕಂತಿದೀರೋ ಮಾಡಿ. ಆದರೆ ಅದಕ್ಕೂ ಮೊದ್ಲು ಬೆಟರ್ಮೆಂಟ್ ಕಮೀಟಿ ಚೇರ್ಮನ್ರ ಜೊತೆ ಮಾತಾಡಿ' ಅಂತ ಸೂಚಿಸಿದರು ಹೆಡ್ ಮೇಷ್ಟ್ರು.

'ಯಾರು ಚೇರ್ಮನ್?'

'ಈ ಊರಲ್ಲಿರೋರು ಒಬ್ರೇ ಚೇರ್ಮನ್; ಅದೇ, ಪಂಚಾಯತದ ಚೇರ್ಮನ್ರು!' ಅಂತ ನಕ್ಕರು ಹೆಡ್ ಮೇಷ್ಟ್ರು.

ಮೇಷ್ಟ್ರು ಮತ್ತೊಮ್ಮೆ ಚೇರ್ಮನ್ನರನ್ನು ಭೇಟಿ ಮಾಡಿ ತನ್ನ ಉದ್ದೇಶವನ್ನು ವಿವರಿಸಿದರು. 'ಇದೆಲ್ಲಾ ಯಾಕೆ ತಲೇ ಮೇಲೆ ಎಳ್ಕೋತೀರಿ, ಮೇಷ್ಟ್ರೆ! ಈಗ ತಾನೇ ರಿಟೈರ್ ಆಗಿ ಬಂದಿದೀರಾ. 'ರಾಮಾ ಕೃಷ್ಣಾ' ಅಂತ ನಿಮ್ಮ ಪಾಡಿಗೆ ನೀವಿರೋದು ಬಿಟ್ಟು...' ಅಂತ ಚೇರ್ಮನ್ರು ರಾಗ ಎಳೆದರು.

'ನಿಮ್ಮ ಆಕ್ಷೇಪ ಇಲ್ಲದಿದ್ರೆ ನಾನೂ ಒಂದಷ್ಟು ಸೇವೆ ಮಾಡೋಣ ಅಂತ' ಅಂದ್ರು ಮೇಷ್ಟ್ರು. 'ಅಯ್ಯೊ! ನೀವಾಗಿ ಸ್ಕೂಲ್‌ನ ಉದ್ಧಾರಾ ಮಾಡ್ತೀನಿ ಅಂತಂದ್ರೆ ಬ್ಯಾಡಾ ಅನ್ನೋಕಾಗತ್ಯೇ? ಮಾಡಿ ಮಾಡಿ' ಅಂತ ಅಂದ್ರು ಚೇರ್ಮನ್.

ಮಾರನೆಯ ದಿನ ಮೇಷ್ಟ್ರು ಇಬ್ಬರು ಕೂಲಿಗಳನ್ನು ಗೊತ್ತುಪಡಿಸಿ ಶಾಲೆಗೆ ಕಳುಹಿಸಿದರು. ಒಂದು ದಿನದಲ್ಲಿ ಬೇಲಿ ರಿಪೇರಿಗೊಂಡಿತು. ಸಾಯಂಕಾಲ ಆಟದ ವೇಳೆಯಲ್ಲಿ ಮೇಷ್ಟ್ರು ಸ್ಕೂಲಿಗೆ ಹೋಗಿ ಮಕ್ಕಳೊಡನೆ ಮಾತಾಡಿ ಶಾಲೆಗೆ ಕೈತೋಟ ಎಷ್ಟು ಮಹತ್ವದ್ದು ಎಂದು ಮನವರಿಕೆ ಮಾಡಿಕೊಟ್ಟರು. ಪ್ರತಿದಿನ ಆಟದ ವೇಳೆ ಮಕ್ಕಳು ತೋಟದ ಕೆಲಸದಲ್ಲಿ ಕೈ ಜೋಡಿಸುವಂತೆ ನೋಡಿಕೊಂಡರು. ಎರಡು ತಿಂಗಳುಗಳಲ್ಲಿ ಶಾಲೆಯಲ್ಲಿ ಹೂ ಗಿಡಗಳು ತಲೆಯೆತ್ತಿದವು. ಮಕ್ಕಳು ಪ್ರತಿದಿನ ಹತ್ತಿರದ ಸರಕಾರೀ ಬಾವಿಯಿಂದ ನೀರನ್ನು ತಂದು ಗಿಡಗಳಿಗೆ ನೀರುಣಿಸಿದರು. ನೋಡನೋಡುತ್ತಿದ್ದಂತೆ ಗಿಡಗಳಿಂದ ಹೂಗಳು ಅರಳತೊಡಗಿದವು. ಹೂಗಳೊಂದಿಗೆ ಮಕ್ಕಳ ಮುಖಗಳೂ ಅರಳಿದವು. ಮೇಷ್ಟ್ರು ಮಾರ್ಗದರ್ಶನದಲ್ಲಿ ಮಕ್ಕಳು ತರಕಾರಿಗಳನ್ನು ಬೆಳೆಯಲು ಪ್ರಾರಂಭಿಸಿದರು. ಊರ ಜನರು ಮಕ್ಕಳು ಬೆಳೆದ ತರಕಾರಿಯನ್ನು ಖರೀದಿಸತೊಡಗಿದರು.

ಮೇಷ್ಟ್ರು ಕೆಲಸ ಇಷ್ಟಕ್ಕೇ ನಿಲ್ಲಲಿಲ್ಲ. ಅಕ್ಕಪಕ್ಕದ ಮನೆಗಳಿಗೆ ಹೋಗಿ ಜನರಿಗೆ ಸ್ವಚ್ಛತೆಯ ಅಗತ್ಯವನ್ನು ವಿವರಿಸಿದರು. ಮನೆಯನ್ನು ಚೊಕ್ಕಟವಾಗಿಟ್ಟರೆ ಮನಸ್ಸಿಗೂ ಸಂತೋಷ ಎಂಬುದನ್ನು ಮನದಟ್ಟು ಮಾಡಿಕೊಟ್ಟರು. ದೈನಂದಿನ ತ್ಯಾಜ್ಯ ವಸ್ತುಗಳನ್ನು ರಸ್ತೆಗೋ, ಚರಂಡಿಗೋ ಎಸೆಯುವದರ ಬದಲು ಹೇಗೆ ಅನುಕೂಲಕ್ಕಾಗಿ ಬಳಸಿಕೊಳ್ಳಬಹುದು ಎಂಬುದನ್ನು ತಿಳಿಹೇಳಿದರು. 'ಪ್ರತಿಯೊಂದು ಮನೆ ಕಂಪೋಸ್ಟ್ ಗೊಬ್ಬರ ತಯಾರಿಸುವ ತಾಣವಾಗಬೇಕು' ಎಂಬ ಆಲೋಚನೆಯನ್ನು ಅವರ ತಲೆಯಲ್ಲಿ ಬಿತ್ತಿದರು. ಪ್ಲಾಸ್ಟಿಕ್‌ನಿಂದ ಆಗುವ ಹಾನಿಯನ್ನು ವಿವರಿಸಿ ಅದರ ಬಳಕೆಯನ್ನು ಮಿತಗೊಳಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಮನೆಯ ಎದುರಿನ ರಸ್ತೆಯನ್ನು ಶುಚಿಯಾಗಿರಿಸುವುದು ಪ್ರತಿಯೊಬ್ಬನ